# ಹೆದ್ದಾರಿಯಲ್ಲಿ...




ಅಗಲವಾಗುತ್ತಿದೆ ಹೆದ್ದಾರಿ
ಹೆಡೆಮುರಿ ಕಟ್ಟಿ ಮರಗಳ
ಬುಡಮೇಲು ಮಾಡಿ
ಟಾರು ಕಾಯಿಸಿ
ಹೊಗೆಯಾಡುತ್ತಿದೆ ಸಣ್ಣಗೆ

ನೆರಳು ಎಲ್ಲೋ ಹೊರಟಿದೆ
ಒಂಟಿ ಬೈಕು ಸವಾರನ
ಬಲಿ ತೆಗೆದುಕೊಳ್ಳುತ್ತ

ಸ್ವಲ್ಪ ನಿಲ್ಲಿ, ಮರಗಳು
ರಸ್ತೆದಾಟುತ್ತಿವೆ
ಗುಡ್ಡಗಳ ಕಡಿದುಕೊಂಡು
ನೀವು ನಿಂತು ಹೊರಡುವುದು
ರೂಢಿಸಿಕೊಳ್ಳಿ

ತುಸು ಹೆಚ್ಚು ಕಮ್ಮಿಯಾದರೆ
ಹೊರಟೇ ಹೊರಟ
ಗ್ಯಾಸ್ ಟ್ಯಾಂಕರ್‌ಗಳು
ಸೂರ್ಯನನ್ನು ಭೂಮಿಗೆ ಕರೆಯುತ್ತವೆ

ಫರ್ಲಾಂಗು ದೂರದ
ಗಾಳಿಯಂತ್ರದ ರೆಕ್ಕೆಗಳು
ಹಾರುತ್ತಿಲ್ಲ
ಬಿಸಿಯುಸಿರೂಡುವ
ಹತ್ತಿರದ ಗದ್ದೆ ಬಯಲುಗಳು
ಕೊನೆಯುಸಿರೆಳೆಯುತ್ತಿವೆ

ಅಲ್ಲಲ್ಲಿ ನಿಂತ ಟ್ರಕ್ಕುಗಳು
ಸ್ಟೌನಲ್ಲಿ ಅನ್ನಬೇಯಿಸಿ
ಗೋಣಿಚೀಲ ಹಾಸಿ
ಅದರಡಿಗೆ ಒರಗಿವೆ

ಸುಖಾಸುಮ್ಮನೆ ಸಂಜೆ ಕೂಡ
ಬಿಕೋ ಎನ್ನುತ್ತಿದೆ
ಹಕ್ಕಿಗಳು ಗುಳೆ ಹೊರಟಿದ್ದು
ಇದೇ ದಾರಿಯಲ್ಲಿಯೇ

ಬೆಟ್ಟ ಗುಡ್ಡಗಳು
ಏದುಸಿರು ಬಿಡುತ್ತಿವೆ
ಬಂಡೆಗಳ ಹೃದಯ
ಚೂರು ಚೂರಾಗಿದೆ
ಒರಲೆ ತಿಂದ ರಸ್ತೆಯಲ್ಲಿ
ಗೋಪುರ ಕಟ್ಟಿವೆ ಗೆದ್ದಲುಗಳು

ಅಲ್ಲೊಂದು ಇಲ್ಲೊಂದು
ಮೋಡಗಳು ನಿಂತು
ಸರ್ವೆ ನಡೆಸುವ ಕಾರ್ಯ
ಪ್ರಗತಿಯಲ್ಲಿದೆ!

**● ಫಾಲ್ಗುಣ ಗೌಡ, ಅಚವೆ**